ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	492
ಸದಸ್ಯರ ಹೆಸರು	ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	10.03.2020.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಅಲಂಕಾರಿಕ ಶಿಲೆಯ ಗಣಿಗಾರಿಕೆಯು ಕ್ಷೀಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ರಾಜ್ಯದಲ್ಲಿ ಅಲಂಕಾರಿಕ ಶಿಲೆಯ ಗಣಿಗಾರಿಕೆ ಕ್ಷೀಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.</td></tr>
<tr><td>ಆ)</td><td>ಕಳೆದ 5 ವರ್ಷಗಳಿಂದ ಈ ಗಣಿಗಾರಿಕೆಯ ಪಕ್ಷಿನೋಟವನ್ನು ನೀಡುವುದು;</td><td>ಕಳೆದ 05 ವರ್ಷಗಳಲ್ಲಿ ಅಲಂಕಾರಿಕ ಶಿಲೆ ಕಲ್ಲುಗಣಿ ಗುತ್ತಿಗೆಗಳಿಂದ ತೆಗೆದು ಸಾಗಾಣಿಕೆ ಮಾಡಿದ ಶಿಲೆಯ ಪ್ರಮಾಣ ಮತ್ತು ರಾಜಧನ ಸಂಗ್ರಹಣೆಯ ವಿವರ ಕೆಳಕಂಡಂತಿದೆ:
<table>
<tr><th>ಕ್ರ ಸಂ.</th><th>ವರ್ಷ</th><th>ಚಾಲ್ತಿಯಲ್ಲಿದ್ದ ಕಲ್ಲುಗಣಿ ಗುತ್ತಿಗೆಗಳ ಸಂಖ್ಯೆ</th><th>ರವಾನಿಸಿದ ಪ್ರಮಾಣ (ಕ್ಯೂ.ಮೀ.)</th><th>ಸಂಗ್ರಹವಾದ ರಾಜಧನ (ರೂ.ಕೋಟಿಗಳಲ್ಲಿ)</th></tr>
<tr><td>1</td><td>2014–15</td><td>432</td><td>347961</td><td>94.67</td></tr>
<tr><td>2</td><td>2015–16</td><td>429</td><td>353371</td><td>96.00</td></tr>
<tr><td>3</td><td>2016–17</td><td>424</td><td>409779</td><td>100.52</td></tr>
<tr><td>4</td><td>2017–18</td><td>470</td><td>430463</td><td>97.81</td></tr>
<tr><td>5</td><td>2018–19</td><td>470</td><td>384919</td><td>85.86</td></tr>
</table></td></tr>
<tr><td>ಇ)</td><td>ಮೇಲ್ಕಂಡ ಗಣಿಗಾರಿಕೆಯನ್ನು ಪುನಶ್ಚೇತನಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?</td><td>ರಾಜ್ಯದಲ್ಲಿನ ಅಲಂಕಾರಿಕ ಶಿಲೆ ಕಲ್ಲುಗಣಿ ಗುತ್ತಿಗೆ ಉದ್ಯಮವು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಾವಿರಾರು ಜನರಿಗೆ ಉದ್ಯೋಗ ಸೃಷ್ಟಿಸಿರುವ ಉದ್ಯಮವಾಗಿರುತ್ತದೆ. ರಾಜ್ಯದಲ್ಲಿ ಉತ್ಪಾದಿಸುವ ಗ್ರಾನೈಟ್‌ನ್ನು ಹೆಚ್ಚಾಗಿ ಚೀನಾ, ತೈವಾನ್ ಮುಂತಾದ ದೇಶಗಳಿಗೆ ರಫ್ತು ಮಾಡುತ್ತಿದ್ದು, ಗ್ರಾನೈಟ್ ರಫ್ತು ಸದರಿ ದೇಶಗಳ ಮಾರುಕಟ್ಟೆ ಆಧಾರಿತವಾಗಿರುತ್ತದೆ.
ಗ್ರಾನೈಟ್ ಉದ್ದಿಮೆಯನ್ನು ಪ್ರೋತ್ಸಾಹಿಸಲು ಸರ್ಕಾರದಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ:-
1. ತ್ವರಿತಗತಿಯಲ್ಲಿ ಗುತ್ತಿಗೆ ಮಂಜೂರಾತಿ ನೀಡಲು ನಿಯಮ ಸರಳೀಕರಣಗೊಳಿಸಲಾಗುತ್ತಿದೆ.
2. ಪರಿಸರ ಸ್ನೇಹಿ ಗಣಿಗಾರಿಕೆಯನ್ನು ಪ್ರೋತ್ಸಾಹಿಸಲಾಗುತ್ತಿದೆ.
3. ಪರಿಸರ ಸ್ನೇಹಿ ಗಣಿಗಾರಿಕೆ ನಡೆಸಲು ಗುತ್ತಿಗೆದಾರರಿಗೆ ನುರಿತ ತಜ್ಞರಿಂದ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.</td></tr>
</table>

ಈ)	ಮೇಲ್ಕಂಡ ಗಣಿಗಾರಿಕೆಗೆ ಅರಣ್ಯ ಇಲಾಖೆಯು ಕೆಲ ಪ್ರಕರಣಗಳಲ್ಲಿ ವಿನಾಕಾರಣ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಅರಣ್ಯ ಪ್ರದೇಶವನ್ನು ಗಣಿಗಾರಿಕೆ ಇತ್ಯಾದಿ ಅರಣ್ಯೇತರ ಉದ್ದೇಶಗಳಿಗಾಗಿ ಉಪಯೋಗಿಸಲು 1980ರ ಅರಣ್ಯ (ಸಂರಕ್ಷಣೆ) ಕಾಯ್ದೆಯಡಿಯಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯುವುದು ಅವಶ್ಯವಿರುತ್ತದೆ. ಇದಕ್ಕಾಗಿ ಸಂಬಂಧಿತ ಉಪಯೋಗಿ ಸಂಸ್ಥೆಯು ಕೇಂದ್ರ ಸರ್ಕಾರದ **ವೆಬ್** ಪೋರ್ಟಲ್ www.parivesh.nic.in ರ ಮೂಲಕ ಆನ್‌ಲೈನ್ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ. ಅರಣ್ಯ ಪ್ರದೇಶದಲ್ಲಿ ಅಲಂಕಾರಿಕ ಶಿಲೆಯ ಗಣಿಗಾರಿಕೆಗಾಗಿ ಮೇಲಿನಂತೆ ಅನುಮೋದನೆ ಪಡೆದ ಪ್ರಕರಣಗಳು ಯಾವುವು ಇರುವುದಿಲ್ಲ.
ಉ)	ಬಂದಿದ್ದಲ್ಲಿ, ಅಂತಹ ಪ್ರಕರಣಗಳ ವಿವರ ನೀಡುವುದು?	ಉದ್ಭವಿಸುವುದಿಲ್ಲ.

ಸಂಖ್ಯೆ: ಸಿಐ 110 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು